# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 290 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 18-07-2024 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಅಂತರ್ಜಲ ವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ನಗರದಲ್ಲಿ ಅಂತರ್ಜಲ ವೃದ್ಧಿಗಾಗಿ ಬೆಂಗಳೂರು ಜಲಮಂಡಳಿ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>• ಬೆಂಗಳೂರು ನಗರದಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಲ್ಲಿ ಕಡ್ಡಾಯವಾಗಿ ಮಳೆ ನೀರು ಕೊಯ್ಲು ಅಳವಡಿಸಬೇಕೆಂದು ಬೆಂಗಳೂರು ಜಲಮಂಡಳಿ ಕಾಯ್ದೆ ಸೆಕ್ಷನ್ 72(ಎ) ಗೆ ದಿನಾಂಕ:07.10.2021 ರಲ್ಲಿ ಈ ಕೆಳಕಂಡಂತೆ ತಿದ್ದುಪಡಿ ತರಲಾಗಿರುತ್ತದೆ.<br><br>**72ಎ. ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸುವ ಹೊಣೆಗಾರಿಕೆ.**<br><br>(1) 108 ಚದರ ಮೀಟರಿಗಿಂತ ಕಡಿಮೆಯಲ್ಲದ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಿರುವವರಿಗೆ ಮಳೆ ನೀರು ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಮನರ್ಭರ್ತಿಗಾಗಿ ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸತಕ್ಕದ್ದು.<br><br>(2) 216 ಚದರ ಮೀಟರುಗಳಿಗಿಂತ ಕಡಿಮೆಯಿರದ ಮತ್ತು 1000 ಚದರ ಮೀಟರುಗಳಿಗಿಂತ ಹೆಚ್ಚಲ್ಲದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ಹೊಂದಿರುವವರಿಗೆ ಮಳೆ ನೀರು ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಮನರ್ಭರ್ತಿಗಾಗಿ ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸತಕ್ಕದ್ದು.<br><br>(3) ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮುಂಚೆ ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸದಿರುವ 1000 ಚದರ ಮೀಟರುಗಳಿಗಿಂತ ಕಡಿಮೆಯಿರದ ವಿಸ್ತೀರ್ಣದಲ್ಲಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ಮಾಲೀಕನು ಅಥವಾ 1000 ಚದರ ಮೀಟರುಗಳಿಗಿಂತ ಕಡಿಮೆಯಿರದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ಹೊಂದಿರುವವರಿಗೆ ದ್ವಿಕೊಳವೆ ವ್ಯವಸ್ಥೆಯನ್ನು ಹಾಗೂ ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸತಕ್ಕದ್ದು.<br><br>• ಬೆಂಗಳೂರು ಜಲಮಂಡಳಿ ವಿನಿಯಮ 72(ಎ) ಗೆ ದಿನಾಂಕ: 06.03.2020 ರ ಪ್ರಕಾರ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳದೆ ಇರುವ ಕಟ್ಟಡಗಳಿಗೆ ಮಾಹೆಯಾನ ಬಿಲ್ಲಿನಲ್ಲಿ ಗೃಹ ಸಂಪರ್ಕಗಳಿಗೆ ಮೊದಲ ಮೂರು ತಿಂಗಳುಗಳಿಗೆ 50% ಮತ್ತು ನಂತರ 100% ರಷ್ಟು ದಂಡ ವಿಧಿಸಲಾಗುವುದು ಹಾಗೂ ಅದೇ ರೀತಿ ಗೃಹೇತರ ಸಂಪರ್ಕಗಳಿಗೆ ಮೊದಲ ಮೂರು ತಿಂಗಳುಗಳಿಗೆ 100% ಮತ್ತು ನಂತರ 200% ರಷ್ಟು ಹೆಚ್ಚುವರಿ ದಂಡವನ್ನು ವಿಧಿಸಲಾಗುತ್ತಿರುತ್ತದೆ. |

| | | |
|---|---|---|
| | | • ಕಟ್ಟಡ ತಾರಸಿ / ಮೇಲ್ಛಾವಣಿಯ ಮೇಲೆ ಬೀಳುವ ಮಳೆ ನೀರು ಸಂಗ್ರಹಣೆಗಾಗಿ ಹಾಗೂ ಮರು ಬಳಕೆಗಾಗಿ ಪ್ರತಿ ಚದರ ಮೀಟರ್‌ಗೆ 20 ಲೀಟರ್‌ನಿಂದ 60 ಲೀಟರ್‌ಗೆ ಹಾಗೂ ನಡೆದಾಡುವ ಮತ್ತು ಬಯಲು ಪ್ರದೇಶದಲ್ಲಿ ಪ್ರತಿ ಚದರ ಮೀಟರ್‌ಗೆ ಅಂತರ್ಜಲ ವೃದ್ಧಿಸಲು ಮಳೆ ನೀರು ಇಂಗು ಗುಂಡಿಗಳ ನಿರ್ಮಾಣಕ್ಕೆ 10 ಲೀಟರ್‌ನಿಂದ 30 ಲೀಟರ್‌ಗೆ ಹೆಚ್ಚಿಸಲಾಗಿದೆ.<br>• ಅಂತರ್ಜಲ ಮಟ್ಟವನ್ನು ವೃದ್ಧಿಸುವ ನಿಟ್ಟಿನಲ್ಲಿ ಜಲಮಂಡಳಿ ವ್ಯಾಪ್ತಿಯಲ್ಲಿರುವ ಬರುವ (Defunct borewells) ಗಳ ಬಳಿ ಒಟ್ಟಾರೆ 2000 ಮಳೆ ನೀರು ಇಂಗು ಗುಂಡಿಗಳನ್ನು / ಮಳೆ ನೀರು ಕೊಯ್ಲು ಪದ್ಧತಿಯನ್ನು ಮಂಡಳಿಯ ವತಿಯಿಂದ ನಿರ್ಮಾಣ ಮಾಡಲಾಗಿರುತ್ತದೆ.<br>• ಸರ್ಕಾರಿ ಶಾಲೆಗಳು / ಆಸ್ಪತ್ರೆ / ಕಛೇರಿ ಕಟ್ಟಡ / ದೇವಾಲಯಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಮಳೆ ನೀರು ಇಂಗು ಗುಂಡಿಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br>• ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿನ 16 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ಕ್ರಮವಹಿಸಲಾಗಿದೆ. |
| ಆ) | ಮಾಹಿತಿ ಪ್ರಕಾರ ಬೆಂಗಳೂರು ಜಲಮಂಡಳಿಯ 50 ಕೆರೆಗಳಿಗೆ ಸಂಸ್ಕರಿತ ನೀರು ತುಂಬಿಸುವ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು; ಈವರೆಗೆ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; | ಬೆಂಗಳೂರು ಜಲಮಂಡಳಿಯು ಈವರೆಗೆ 16 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲಾಗಿದೆ. ಮುಂದುವರೆದು, 6 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಇ) | ಅಂತರ್ಜಲ ಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸುವುದೇ? | ಹೌದು |

**ಸಂಖ್ಯೆ:** ನಅಇ 100 ಎಂಎನ್‌ಐ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ